ಇದರಲ್ಲಿ ಹಂಚಿಕೆಯಾದ ನಿವೇಶನಗಳೆಷ್ಟು?

ಆ) ನಗರಾಭಿವೃದ್ಧಿ ಪ್ರಾಧಿಕಾರದವರು ಹುಬ್ಬಳ್ಳಿ ತಾಲ್ಲೂಕ್ ಪೈಕಿ ಅಮರಗೋಳ, ಸುತಗಟ್ಟಿ ಬೈರಿದೇವರಕೊಪ್ಪ, ಉಣಕಲ್ ಗ್ರಾಮಗಳಲ್ಲಿಯ ಜಮೀನುಗಳನ್ನು ನಿಯಮಾನುಸಾರ ಭೂಸ್ವಾಧೀನಪಡಿಸಿಕೊಳ್ಳದೇ ಗ್ರಾಮ ದಪ್ತರಲ್ಲಿ ''ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಭೂಸ್ವಾಧೀನಕ್ಕೊಳಪಟ್ಟಿದೆ'' ಅಂತಾ ನಮೂದಿಸಿರುವುದು ಸುಮಾರು 5 ವರ್ಷಗಳ ಮೇಲೆ ಹಾಗೆಯೇ ಮುಂದುವರೆದದ್ದು, ಸರ್ಕಾರದ ಗಮನಕೆ ಬಂದಿದೆಯೇ?

ಇ) ಬಂದಿದ್ದರೆ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು, ವಿವರ ನೀಡುವುದು.

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

ಅ) ಕಳೆದ ಐದು ವರ್ಷಗಳಲ್ಲಿ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಸತಿ ಯೋಜನೆಗಾಗಿ ಸುಮಾರು 620ಎಕರೆ 39 ಗುಂಟೆ ಕ್ಷೇತ್ರಗಳನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಇದರಲ್ಲಿ ವಿವಿಧ ಅಳತೆಯ ಒಟ್ಟು 4,057 ನಿವೇಶನಗಳನ್ನು ಇಲ್ಲಿಯವರೆಗೆ ವಿತರಿಸಲಾಗಿದೆ.

ಆ ಮತ್ತು ಇ) ಹೌದು.

ಉಣಕಲ್ ಗ್ರಾಮದ 1,11 ಮತ್ತು 111ನೇ ಹಂತದಲ್ಲಿ ಹಾಗೂ ಬೈರಿದೇವರಕೊಪ್ಪದ 1ನೇ ಹಂತದಲ್ಲಿ ವಸತಿ ಯೋಜನೆಗೆ ಸುಮಾರು 531 ಎಕರೆ 32 ಗುಂಟೆಗಳಷ್ಟು ಜಮೀನನ್ನು ಭೂಸ್ವಾಧೀನಕ್ಕೆ ಒಳಪಡಿಸಲಾಗಿದೆ. ಮೇಲೆ ತಿಳಿಸಿದ 4 ಯೋಜನೆಗೆ ಸರ್ಕಾರದಿಂದ ಅಂತಿಮ ಅಧಿಸೂಚನೆಯಾಗಿ ರಾಜ್ಯಪತ್ರದಲ್ಲಿ ಪ್ರಕಟಣೆಗೊಂಡಿರುವುದರಿಂದ ಸದರಿ ಜಮೀನುಗಳ ಪಹಣಿಪತ್ರ ಇತರೆ ಹಕ್ಕಿನಲ್ಲಿ ಪ್ರಾಧಿಕಾರಕ್ಕೆ ಒಳಪಟ್ಟಿದೆ ಎಂಬುದಾಗಿ ದಾಖಲೆ ಇರುತ್ತದೆ.

ಅಮರಗೋಳ ಮತ್ತು ಸುತಗಟ್ಟಿ ಈ ಎರಡು ಗ್ರಾಮಗಳ ಪೈಕಿ ಅಮರಗೋಳಗ್ರಾಮದಲ್ಲಿ ವಸತಿ ಯೋಜನೆಗಾಗಿ ಸುಮಾರು 122 ಎಕರೆ 06 ಗುಂಟೆ ಕ್ಷೇತ್ರವನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿತ್ತು. ಇದರಲ್ಲಿ ಸರ್ಕಾರವು ಕೆಲವು ಭೂಮಿಯನ್ನು ಭೂಸ್ವಾಧೀನ ಕ್ರಮದಿಂದ ಕೈಬಿಟ್ಟಿರುವುದರಿಂದ ಅದು ಸರ್ಕಾರಿ ಪತ್ರದಲ್ಲಿ ಪ್ರಕಟವಾದ ನಂತರ ಪಹಣಿ ಪತ್ರದಲ್ಲಿ ಸೂಕ್ತ ಬದಲಾವಣೆ ಮಾಡಲಾಗುವುದು. ಸುತಗಟ್ಟಿ ಗ್ರಾಮದಲ್ಲಿ ವಸತಿ ಯೋಜನೆಗಾಗಿ ಯಾವುದೇ ಜಮೀನುಗಳನ್ನು ಭೂ ಸ್ವಾಧೀನಕ್ಕೆ ಒಳಪಡಿಸಿರುವುದಿಲ್ಲ.

ವಿಷಯ: ರೋಜ್‌ಗಾರ ಯೋಜನೆಯಡಿಯಲ್ಲಿ ನಿರುದ್ಯೋಗಿಗಳಿಗೆ ಅನ್ಯಾಯ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಗ್ರಾಮೀಣ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ರೋಜ್‌ಗಾರ್ ಯೋಜನೆ ಅಡಿಯಲ್ಲಿ ವಿದ್ಯಾವಂತ ನಿರುದ್ಯೋಗಿಗಳಿಗೆ ತಾಲ್ಲೂಕುವಾರು ಎಷ್ಟು ಎಷ್ಟು ಹಣ ಬಿಡುಗಡೆ ಮಾಡಿದೆ;

ಆ) ಸುಮಾರು ಕಡೆ ಆಯ್ಕೆ ಸಮಿತಿಯವರು ಅರ್ಹರನ್ನು ಬಿಟ್ಟು ಅನರ್ಹರನ್ನು ಆಯ್ಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ತಾಲ್ಲೂಕುವಾರು ಆಯ್ಕೆ ಸಮಿತಿ ರಚಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು; ಸ್ಥಳೀಯ ಶಾಸಕರನ್ನು ಆಯ್ಕೆ ಸಮಿತಿಯಲ್ಲಿ ಅಧ್ಯಕ್ಷರನ್ನಾಗಿ ಮಾಡುವುದು ಉಚಿತವಲ್ಲವೇ?

ಶ್ರೀ ಬಿ.ಎ.ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು.)

1994-95, 1995-96, ಮತ್ತು 1996-97ನೇ ಸಾಲಿನ ತಾಲ್ಲೂಕುವಾರು ಬಿಡುಗಡೆಯಾದ ಹಣದ ವಿವರಗಳನ್ನು ಅನುಬಂಧ-'ಅ'ದಲ್ಲಿ ನೀಡಲಾಗಿದೆ.

ಆ) ಆಯ್ಕೆ ಸಮಿತಿಯವರು ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆ ಅಡಿಯಲ್ಲಿ ಅರ್ಹತೆ ಇರುವ ನಿಬಂಧನೆಗಳಿಗೆ ಒಳಪಟ್ಟಿರುವ ಆಡಳಿತ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡುತ್ತಾರೆ. ಅನರ್ಹರನ್ನು ಆಯ್ಕೆ ಮಾಡಿರುವ ವಿಚಾರ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

ಇ) ತಾಲ್ಲೂಕು ಮಟ್ಟದ ಆಯ್ಕೆ ಸಮಿತಿಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ರಾಜ್ಯ ಸರ್ಕಾರದವರು ನೀಡಿರುವ ಆದೇಶ ಸಂಖ್ಯೆ ಸಿಐ224 ಎಸ್‌ಪಿಸಿ 95, ದಿನಾಂಕ 20-6-1996ರನ್ವಯ ರಚಿಸಲಾಗಿದೆ. ಈಗಿರುವ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಿಸಲು ಅವಕಾಶವಿರುವುದಿಲ್ಲ.

ಅನುಬಂಧ-ಅ

ತಾಲ್ಲೂಕುವಾರು ಹಣ ಬಿಡುಗಡೆ ವಿವರಗಳು

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ತಾಲ್ಲೂಕಿನ ಹೆಸರು	1994-95		1995-96		1996-97	
		ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1.	ಬ್ಯಾಡಗಿ	22	5.63	29	10.47	27	9.15
2.	ಧಾರವಾಡ	148	85.13	193	108.13	216	140.62
3.	ಗದಗ	84	55.25	105	61.30	116	70.00
4.	ಹಾನಗಲ್	28	11.33	23	8.37	28	13.68
5.	ಹಾವೇರಿ	36	18.44	34	12.39	38	18.33
6.	ಹಿರೇಕರೂರ್	17	7.63	19	7.30	10	5.47
7.	ಹುಬ್ಬಳ್ಳಿ	291	173.15	350	217.22	391	252.61
8.	ಕಲಘಟಗಿ	16	6.36	25	10.05	14	6.15
9.	ಕುಂದಗೋಳ	17	6.19	19	7.56	22	9.60
10.	ನರಗುಂದ	26	11.27	26	10.83	26	12.90
11.	ಮುಂಡರಗಿ	12	5.40	15	4.33	26	4.98
12.	ನವಲಗುಂದ	32	16.51	38	22.93	24	11.86
13.	ರಾಣೆಬೆನ್ನೂರು	54	25.91	65	29.55	73	42.94
14.	ರೋಣ	24	8.62	44	16.11	34	15.68
15.	ಸವಣೂರು	7	2.84	8	2.98	17	5.37
16.	ಶಿಗ್ಗಾಂವ್	10	-	17	0.15	15	7.45
17.	ಶಿರಹಟ್ಟಿ	36	16.41	36	19.75	30	20.68
	ಒಟ್ಟು :	860	456.17	1046	550.42	1107	647.55